ಮೂಲ ದಾವಾ ಸಂಖ್ಯೆ. 179/2017 ಪಿ ಡಬ್ಲ್ಯೂ 1

(ದಿನಾಂಕ 05-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಎಸ್ ಹೆಚ್ ವಿ ವಕೀಲರಿಂದಃ-

ಈ ದಾವೆಯನ್ನು ನಾನು ಪ್ರತಿವಾದಿಯರ ಮೇಲೆ ದಾಖಲಿಸಿದ್ದೇನೆ. ಅವರು ನನಗೆ ಸಂಬಂಧಿಕರು ಇರುವುದಿಲ್ಲ. ಈ ದಾವೆಯನ್ನು ನಾನು 7 ಸರ್ವೆ ನಂಬರ್ ಜಮೀನುಗಳ ಮೇಲೆ ದಾಖಲಿಸಿದ್ದೇನೆ. ಸದರಿ ಸರ್ವೆ ನಂಬರುಗಳನ್ನು ಹೇಳಬಹುದಾ ಎಂದರೆ ಸಾಕ್ಷಿಯು ನಾನು ವಿದ್ಯಾಭ್ಯಾಸ ಮಾಡಿಲ್ಲ ನನಗೆ ಹೇಳಲು ನೆನಪು ಬರುವುದಿಲ್ಲವೆನ್ನುತ್ತಾರೆ. 1ನೇ ಪ್ರತಿವಾದಿಯ ತಂದೆಯ ಹೆಸರು ಸಣ್ಣ ಗೋಣೆಪ್ಪ. ನನ್ನ ತಂದೆಯ ಹೆಸರು ಮುದ್ದಿಬಸಪ್ಪ ಇರುತ್ತದೆ. 2ನೇ ಪ್ರತಿವಾದಿಯ ತಂದೆ ಅಡವಿಬಸಪ್ಪ ನನಗೆ ಸಂಬಂಧಿಕರು ಇರುವುದಿಲ್ಲ. ನನ್ನ ತಂದೆಯ ತಂದೆ ಹೆಸರು ಸುಡುಗಾಡಪ್ಪ ಇರುತ್ತದೆ. ಸುಡುಗಾಡಪ್ಪ ಇವರ ಹೆಂಡತಿಯ ಹೆಸರು ತಿಂದಮ್ಮ ಇರುತ್ತದೆ. ಬಸಪ್ಪ ಮತ್ತು ಕೆಂಚಮ್ಮ ನನಗೆ ಸಂಬಂಧಿಕರು ಇರುವುದಿಲ್ಲ. ನನ್ನ ಅಜ್ಜ ಸುಡುಗಾಡಪ್ಪ ಇವರಿಗೆ ಸಣ್ಣಗೋಣೆಪ್ಪ, ಅಡವಿಬಸಪ್ಪ ಇವರು ಮೂರು ಜನ ಸಹೋದರರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸುಡುಗಾಡಪ್ಪ ಇವರಿಗೆ ಯಾವುದೇ ಸಹೋದರರು ಇರುವುದಿಲ್ಲವೆನ್ನುತ್ತಾರೆ. ಸುಡುಗಾಡಪ್ಪ, ಸಣ್ಣಗೋಣೆಪ್ಪ ಮತ್ತು ಅಡವಿಬಸಪ್ಪ ಇವರ ತಂದೆ ಹೆಸರು ಬಸಪ್ಪ ಮತ್ತು ತಾಯಿಯ ಹೆಸರು ಕೆಂಚಮ್ಮ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜ ಸುಡುಗಾಡಪ್ಪ ಇವರಿಗೆ ನನ್ನ ತಂದೆ ಮುದ್ದಿಬಸಪ್ಪ ಏಕೈಕ ಮಗ ಎಂದರೆ ಸರಿ.

ಸಣ್ಣಗೋಣೆಪ್ಪ ಇವರಿಗೆ 6 ಜನ ಮಕ್ಕಳು ಅವರೆಂದರೆ ಬಸಪ್ಪ, ಬಸಮ್ಮ, ಕೆಂಚಮ್ಮ, ತಿಮ್ಮಪ್ಪ, ಗಂಗಮ್ಮ ಮತ್ತು ಹೊಟ್ಟೆ ಹನುಮಪ್ಪ ಎಂದರೆ ಸರಿ. ಅಡವಿಬಸಪ್ಪ ಇವರಿಗೆ ಸುಡುಗಾಡವ್ವ, ದುಂಡವ್ವ ಮತ್ತು ದುರುಗಪ್ಪ ಎಂಬ ಮೂರು ಜನ ಮಕ್ಕಳೆಂದರೆ ಸರಿ. ದಾವಾಸ್ತಿಯು ಮೂಲತಃ ನಮ್ಮ ಅಜ್ಜ ಸುಡುಗಾಡಪ್ಪ ಇವರಿಗೆ ಸೇರಿದ ಜಮೀನುಗಳಾಗಿರುತ್ತವೆ. ದಾವಾಸ್ತಿಗಳು ಸುಡುಗಾಡಪ್ಪ ಅವನ ಸಹೋದರರಾದ ಸಣ್ಣಗೋಣೆಪ್ಪ ಮತ್ತು ಅಡವಿಬಸಪ್ಪ ಇವರಿಗೆ ಸೇರಿದ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತವೆಂದರೆ ಸರಿಯಲ್ಲ. ದಾವಾಸ್ತಿಗಳನ್ನು ಸುಡುಗಾಡಪ್ಪ ಮತ್ತು ಅವನ ಸಹೋದರರಾದ ಸಣ್ಣಗೋಣೆಪ್ಪ ಹಾಗೂ ಅಡವಿಬಸಪ್ಪ ಇವರು ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಸದರಿ ಮೂರು ಜನರು ದಾವಾಸ್ತಿಗಳನ್ನು ದಿನಾಂಕಃ02-01-1989 ರಂದು ಲಿಖಿತ ಪಾಲುಪಟ್ಟಿಯ ಪ್ರಕಾರ ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಸದರಿ ಪಾಲುಪಟ್ಟಿಯಂತೆ ನಮ್ಮ ಅಜ್ಜ ಸುಡುಗಾಡಪ್ಪ

ಇವರಿಗೆ ಸರ್ವೆ ನಂ.77 ರಲ್ಲಿ 2.21 ಎಕರೆ, ಸರ್ವೆ ನಂ.80 ರಲ್ಲಿ 1.90 ಎಕರೆ, ಸರ್ವೆ ನಂ.43 ಪೈಕಿ 2.19 ಎಕರೆ, ಸರ್ವೆ ನಂ.44 ಬಿ ಪೈಕಿ 1.30 ಎಕರೆ, ಸರ್ವೆ ನಂ.47 ರ ಪೈಕಿ 0.37 ಎಕರೆ ಹಾಗೂ ಸರ್ವೆ ನಂ.38 ಎ ಪೈಕಿ ಒಂದು ಎಕರೆ ಜಮೀನು ಒಟ್ಟು 8 ಎಕರೆ 97 ಸೆಂಟ್ಸ ಜಮೀನು ಬಂದಿರುತ್ತದೆಂದರೆ ಸರಿಯಲ್ಲ. ಅದೇ ರೀತಿ ಸಣ್ಣಗೋಣೆಪ್ಪ ಇವರ ಭಾಗಕ್ಕೆ ಮೇಲ್ಕಂಡ ಸರ್ವೆ ನಂಬರುಗಳಲ್ಲಿ 8 ಎಕರೆ 53 ಸೆಂಟ್ಸ ಜಮೀನು ಬಂದಿರುತ್ತದೆಂದರೆ ಸರಿಯಲ್ಲ. ಅದೇ ರೀತಿ ಮೇಲ್ಕಂಡ ಸರ್ವೆ ನಂಬರುಗಳಲ್ಲಿ ಅಡವಿಬಸಪ್ಪನಿಗೆ ಬರಬೇಕಾದ ಭಾಗ ಅವನ ಮಗ ಎರಡನೇ ಪ್ರತಿವಾದಿಗೆ 10 ಎಕರೆ 36 ಸೆಂಟ್ಸ ಜಮೀನು ಬಂದಿರುತ್ತದೆಂದರೆ ಸರಿಯಲ್ಲ. ಸದರಿ ಪಾಲುಪಟ್ಟಿಯಲ್ಲಿ ಸರ್ವೆ ನಂ.80 ರಲ್ಲಿರುವಂತಹ ರಿಗ್ ಬೋರ್ ಮತ್ತು ಪಂಪ್ ಸೆಟ್ ನಲ್ಲಿ ನನ್ನ ತಂದೆಗೆ ಮತ್ತು 1ನೇ ಪ್ರತಿವಾದಿಗೆ ಸಮನಾದ ಹಕ್ಕು ಇದೆ ಅಂತಾ ನಮೂದು ಮಾಡಿದ್ದು ಇದೆ ಎಂದರೆ ಸರಿಯಲ್ಲ. ಸದರಿ ಪಾಲುಪಟ್ಟಿಯನ್ನು ನಮ್ಮ ಊರಿನ ಹಿರಿಯರ ಸಮ್ಮುಖದಲ್ಲಿ ಆಗಿರುತ್ತದೆಂದರೆ ಸರಿಯಲ್ಲ. ಸದ ಪಾಲುಪಟ್ಟಿಗೆ ನನ್ನ ತಂದೆ ಹೆಬ್ಬೆಟ್ಟು ಮಾಡಿರುತ್ತಾರೆ ಮತ್ತು ಪ್ರತಿವಾದಿಯರು ಸಹಿ ಮಾಡಿರುತ್ತಾರೆಂದರೆ ಸರಿಯಲ್ಲ. ಪಾಲುಪಟ್ಟಿಯಂತೆ ಮೇಲ್ಕಂಡ ಜಮೀನಿನ ಸರ್ವೆ ನಂಬರುಗಳ ಪಹಣಿಗಳಲ್ಲಿ ನಮ್ಮ ಮತ್ತು ಪ್ರತಿವಾದಿಯರ ಹೆಸರು ದಾಖಲಾಗಿರುತ್ತದೆಂದರೆ ಸರಿಯಲ್ಲ. ಪಾಲುಪಟ್ಟಿಯಂತೆ 1ನೇ ಪ್ರತಿವಾದಿಯ ತಂದೆ ಮತ್ತು ನಾವು ಹಾಗೂ 2ನೇ ಪ್ರತಿವಾದಿಯು ತಮ್ಮ ಭಾಗಕ್ಕೆ ಬಂದ ಜಮೀನುಗಳಲ್ಲಿ ಸ್ವಾಧೀನದಲ್ಲಿರುತ್ತೇವೆಂದರೆ ಸರಿಯಲ್ಲ. ಸದರಿ ಪಾಲುವಿಭಾಗದ ವಿಚಾರ ನನಗೆ ಗೊತ್ತಿದ್ದರೂ ಸಹಾ ಗೊತ್ತಿಲ್ಲ ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಆಸ್ತಿಗಳ ಚಕ್ಕುಬಂದಿಗಳ ಮಾಹಿತಿಯನ್ನು ನಮ್ಮ ವಕೀಲರಿಗೆ ನಾನೇ ನೀಡಿದ್ದೇನೆ. 1ನೇ ಪ್ರತಿವಾದಿಯ ತಂದೆಗೆ ಬಂದಂತಹ ಭಾಗದಲ್ಲಿ 1ನೇ ಪ್ರತಿವಾದಿ ಮತ್ತು ಅವನ ಸಹೋದರರರು ವಿಭಾಗ ಮಾಡಿಕೊಂಡಿದ್ದು ಅವರ ಹೆಸರಿಗೆ ಪಹಣಿಗಳು ಸಹಾ ಬಂದಿರುತ್ತವೆಂದರೆ ಸರಿಯಲ್ಲ. ಸದರಿ ಪಾಲುಪಟ್ಟಿಯನ್ನು ಸೃಷ್ಟಿ ಮಾಡಿರುತ್ತಾರಂತಾ ನಾನು ನನ್ನ ವಾದಪತ್ರದಲ್ಲಿ ಸುಳ್ಳು ಹೇಳಿ ಬರೆಸಿರುತ್ತೇನೆಂದರೆ ಸರಿಯಲ್ಲ.

ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ಕಂದಾಯಾಧಿಕಾರಿಗಳು ನಮ್ಮ ಗ್ರಾಮಕ್ಕೆ ಬಂದಿದ್ದರು ಎಂದರೆ ಸಾಕ್ಷಿಯು ಆ ಸಮಯದಲ್ಲಿ ಪ್ರತಿವಾದಿಯರು ಬರಲಿಲ್ಲ ಆ ಕಾರಣದಿಂದಾಗಿ ನಾವು ನ್ಯಾಯಾಲಯಕ್ಕೆ ಬಂದಿರುತ್ತೇವೆ ಎನ್ನುತ್ತಾರೆ. ದಿಃ 30-09-2017 ರಂದು ನಾವೇ ಪ್ರತಿವಾದಿಯ ಜಮೀನಿನ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತೇವೆಂದರೆ ಸರಿಯಲ್ಲ. ಸರ್ವೆ ನಂ.75 ಸಿ ಮತ್ತು 71 ಎ ಜಮೀನುಗಳನ್ನು ನಾವು ಹಂಚಿಕೊಂಡಿರುವುದಿಲ್ಲ. ಸದರಿ ಸರ್ವೆ ನಂಬರುಗಳು

ಮೂಲ ದಾವಾ ಸಂಖ್ಯೆ. 179/2017 ಪಿ ಡಬ್ಲ್ಯೂ 1

ಎಲ್ಲಿರುತ್ತವೆನ್ನುವುದು ಗೊತ್ತಿಲ್ಲದ್ದರಿಂದ ಅವುಗಳನ್ನು ಪಾಲುಪಟ್ಟಿಯಲ್ಲಿ ಸೇರಿಸಿಲ್ಲವೆಂದರೆ ಸರಿಯಲ್ಲ. ಸರ್ವೆ ನಂ. 75 ಸಿ ಮತ್ತು 71 ಎ ಯಾರ ಸ್ವಾಧೀನದಲ್ಲಿಯೂ ಇರುವುದಿಲ್ಲವೆಂದರೆ ಸಾಕ್ಷಿಯು ಅದರ ಸ್ವಾಧೀನದಲ್ಲಿ ನಾವು ಇರುತ್ತೇವೆನ್ನುತ್ತಾರೆ. ಪ್ರಸ್ತುತ ದಾವೆಯಲ್ಲಿ ಈ ಎರಡೂ ಜಮೀನುಗಳನ್ನು ನಾನು ಸೇರಿಸಿರುವುದಿಲ್ಲ. ಈ ಜಮೀನುಗಳನ್ನು ನಾನು ಸಾಗು ಮಾಡುತ್ತಿಲ್ಲವಾದ್ದರಿಂದ ನಾನು ಈ ದಾವೆಯಲ್ಲಿ ಅವುಗಳನ್ನು ಸೇರಿಸಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಗಳ ಚಕ್ಕುಬಂದಿಗಳನ್ನು ನನಗೆ ಹೇಳಲು ಬರುವುದಿಲ್ಲ. ಈ ಹಿಂದೆಯೇ ಪಾಲುಪಟ್ಟಿಯಾದರೂ ಸಹಾ ದಾವಾಸ್ತಿಯನ್ನು ಕಬಳಿಸಲು ಯಾವುದೇ ಪಾಲುಪಟ್ಟಿಯಾಗಿಲ್ಲ ಅಂತಾ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ಪ್ರಮಾಣಪತ್ರ ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಂಪ್ ಸೆಟ್ ನಲ್ಲಿ ನಾವು ಮತ್ತು ಪ್ರತಿವಾದಿಯರು ಸಮನಾಗಿ ಉಪಯೋಗಿಸುತ್ತಾ ಬಂದಿರುತ್ತೇವೆಂದರೆ ಸರಿಯಲ್ಲ. ಪ್ರತಿವಾದಿಯರು ನಮಗೆ ಸಂಬಂಧಿಕರಿದ್ದರೂ ಸಹಾ ಅವರು ನಮಗೆ ಸಂಬಂಧವಿಲ್ಲ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ